CC NO.  PW   CW

30ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು.
ಬೆಂಗಳೂರು ನಗರ.

ಸಿ.ಸಿ. ನಂಃ37356/2021          ಪ್ರಾಸಾ-1     ಚಾಸಾ-1

| | |
|---|---|
| ಸಾಕ್ಷಿಯ ಹೆಸರು | ಶ್ರೀ ಅರವಿಂದ್ ಕುಮಾರ್ |
| ತಂದೆಯ/ಗಂಡನ ಹೆಸರು | ಗಜೇಂದ್ರ |
| ವಯಸ್ಸು | 30 ವರ್ಷ |
| ಉದ್ಯೋಗ | ಪಿ ಎಸ್ ಐ, ಸಿ ಕೆ ಅಚ್ಚುಕಟ್ಟು ಪೋಲಿಸ್ ಠಾಣೆ |
| ವಿಳಾಸ | ಬೆಂಗಳೂರು. |

ಸಾಕ್ಷಿಯನ್ನು ಈ ದಿವಸ ದಿನಾಂಕಃ14-12-2022 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ. ರವರಿಂದ.

ನಾನು 2019 ರಿಂದ ಆಗಸ್ಟ್ 2021 ರವರೆಗೆ ಜೆ ಪಿ ನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ29-12-2021 ರಂದು ಬೆಳಗ್ಗೆ 10-00 ಗಂಟೆಯಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ, ಸಾರಕ್ಕಿ ಮಾರುಕಟ್ಟೆಯ ಹಿಂಭಾಗದ ರಸ್ತೆಯಲ್ಲಿ ಇಬ್ಬರು ವ್ಯಕ್ತಿಗಳು ಕೃಷ್ಣಮೃಗದ ಚರ್ಮ ಮತ್ತು ಕೊಂಬುಗಳನ್ನು ಮಾರಾಟ ಮಾಡುತ್ತಿದ್ದಾರೆ ಅಂತ ಬಾತ್ಮೀದಾರರಿಂದ ಖಚಿತ ಮಾಹಿತಿ ಬಂದಿತು. ಮದನ್ ಮತ್ತು ಗುರು ಎಂಬುವವರನ್ನು ಪಂಚರನ್ನಾಗಿ ಬರಮಾಡಿಕೊಂಡು ಅವರಿಗೆ ನೋಟಿಸ್ ಕೊಟ್ಟೆನು. ಆ ನೋಟಿಸ್ ನ್ನು ನಿಪಿ-1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಮ್ಮ ಸಿಬ್ಬಂದಿಗಳಾದ ನರಸಿಂಹ ಮೂರ್ತಿ, ಪ್ರವೀಣ್, ತಿಮ್ಮೇಗೌಡ, ರಾಜೇಶ್ ಇವರು ಮತ್ತು ಪಂಚರೊಂದಿಗೆ ಖಾಸಗಿ ವಾಹನದಲ್ಲಿ ಠಾಣೆಯಿಂದ ಬೆಳಗ್ಗೆ 10-30 ಗಂಟೆಗೆ ಹೊರಟೆವು. ಮಾಹಿತಿ ಬಂದ ಸ್ಥಳಕ್ಕೆ ಹೋದಾಗ ಬೆಳಗ್ಗೆ 10-45 ಗಂಟೆಯಾಗಿತ್ತು. ಅಲ್ಲಿದ್ದ ಆಸಾಮಿಗಳನ್ನು ಸುತ್ತುವರಿದು ಹಿಡಿದು ವಿಚಾರಿಸಿದೆವು. ಅವರ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ, ಒಬ್ಬನ ಹೆಸರು ಯರಿಸ್ವಾಮಿ ಮತ್ತು ಲೋಕೇಶ್ ಅಂತ ತಿಳಿಸಿದರು. ಅವರಿಬ್ಬರನ್ನೂ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಯರಿಸ್ವಾಮಿ ಮತ್ತು 2 ನೇ ಆರೋಪಿಯನ್ನು ಲೋಕೇಶ್ ಎಂದು ಗುರುತಿಸಿರುತ್ತಾರೆ.

CC NO. PW CW

ಆರೋಪಿತರ ಬಳಿ ಇದ್ದ ಗೋಣಿಚೀಲವನ್ನು ಸಿಬ್ಬಂದಿಗಳ ಸಹಾಯದಿಂದ ಪರಿಶೀಲಿಸಿದಾಗ, ಕೃಷ್ಣಮೃಗದ 2 ಚರ್ಮಗಳು ಹಾಗೂ 4 ಕೊಂಬುಗಳು ಇದ್ದವು. ಅವುಗಳ ಮೂಲದ ಬಗ್ಗೆ ಪ್ರಶ್ನಿಸಿದಾಗ ಆರೋಪಿತರು ತಾವು ವಾಸವಾಗಿರುವ ಅನಂತಪುರ ಜಿಲ್ಲೆಯ ಪಾಲೂರು ಗ್ರಾಮದಿಂದ ತಂದಿರುವುದಾಗಿ ತಿಳಿಸಿದರು. ಅವುಗಳನ್ನು ಮಾರಾಟ ಮಾಡಲು ತಂದಿರುವುದಾಗಿ ತಿಳಿಸಿದರು. ಆರೋಪಿತರ ಬಳಿ ಲೈಸನ್ಸ್ ಬಗ್ಗೆ ವಿಚಾರಿಸಿದಾಗ ಲೈಸೆನ್ಸ್ ಇಲ್ಲ ಎಂದು ತಿಳಿಸಿದರು.

ಲೈಸನ್ಸ್ ಇಲ್ಲದೇ ಮಾರಾಟ ಮಾಡುವುದು ತಪ್ಪು ಎಂದು ತಿಳಿಸಿದಾಗ ಆರೋಪಿತರು ಒಪ್ಪಿಕೊಂಡರು. ಅವುಗಳನ್ನು ಬೆಳಗ್ಗೆ 10-45 ರಿಂದ 11-45 ಗಂಟೆಯವರಗೆ ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡೆವು. ಮಹಜರನ್ನು ನಿಪಿ-2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ರುಜುವನ್ನು ನಿಪಿ-2(ಎ) ಎಂದು ಮತ್ತು ಆರೋಪಿತರ ರುಜುಗಳನ್ನು ನಿಪಿ-2(ಬಿ) ಮತ್ತು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಅಮಾನತ್ತು ಪಡಿಸಿಕೊಂಡು ವಸ್ತುಗಳನ್ನು, ಮಹಜರನ್ನು ಮತ್ತು ಆರೋಪಿತರನ್ನು ಚಾಸಾ-10 ಇವರ ಮುಂದೆ ಹಾಜರುಪಡಿಸಿದೆನು. ಅಮಾನತ್ತು ಪಡಿಸಿಕೊಂಡ ವಸ್ತುಗಳ ಫೋಟೊವನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪಾಟೀ ಸವಾಲನ್ನು ಕಾಯ್ದಿರಿಸಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

30ನೇ ಅ.ಮು.ಮ.ದಂ. ಬೆಂಗಳೂರು.